ಭದ್ರಾ ಆಧುನೀಕರಣ ಕಾಮಗಾರಿಗಳನ್ನು ಸುಮಾರು 4 ವರ್ಷಗಳಿಂದ ನಿರ್ವಹಿಸಲಾಗುತ್ತಿದ್ದು, ಮಳೆಗಾಲದಲ್ಲಿ ನಾಲೆಗಳ ಮೇಲ್ಭಾಗದಿಂದ ನೀರು ನುಗ್ಗಿ ಕೆಲವು ಸ್ಥಳಗಳಲಿ ನಾಲೆ ಕೊರೆತಕ್ಕೆ ಒಳಗಾಗಿ ಲೈನಿಂಗ ಧಕ್ಕೆಯಾಗಿದ್ದು, ಇದನ್ನು ಗುತ್ತಿಗೆದಾರರ ವತಿಯಿಂದಲೇ ಸರ್ಕಾರಕ್ಕೆ ಯಾವುದೇ ಹೆಚ್ಚುವರಿ ಆರ್ಥಿಕ ಹೊರೆಯಾಗದಂತೆ ದುರಸ್ಥಿಪಡಿಸಿಕೊಳ್ಳಲಾಗುತ್ತಿದೆ. ಇದಲ್ಲದೇ, ಆಧುನೀಕರಣ ಕಾಮಗಾರಿಗಳ ಪರಿವೀಕ್ಷಣೆ ಸಮಯದಲ್ಲಿ ಕಂಡುಬಂದ ನ್ಯೂನತೆಗಳಿಗೆ ಸಹ ಗುತ್ತಿಗೆದಾರರ ವತಿಯಿಂದಲೇ ಟೆಂಡರ್ ನಿಯಮಾವಳಿಗಳ ಪ್ರಕಾರ ಸರಿಪಡಿಸಿಕೊಳ್ಳಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ. ಇವುಗಳ ದುರಸ್ತಿಯ ನಂತರವೇ ಸಂಬಂಧಿಸಿದ ಅಧಿಕಾರಿಗಳಿಂದ ದೃಢೀಕರಣ ಪಡೆದು ಗುತ್ತಿಗೆದಾರರಿಗೆ ತಡೆಹಿಡಿದಿರುವ ಹಣವನ್ನು ಪಾವತಿ ಮಾಡಲಾಗುವುದು.

ಭದ್ರಾ ಆಧುನೀಕರಣ ಕಾಮಗಾರಿಗಳನ್ನು ನಿಗಮದ ವರ್ಗೀಕೃತ (ಕೆಟಗರಿ) ಗುತ್ತಿಗೆದಾರರಿಗೆ ವಹಿಸಿದ್ದು, ಕಾಮಗಾರಿಗಳ ಗುಣಮಟ್ಟ ಕಾಪಾಡಿಕೊಳ್ಳಲು ಮೂರನೇ ಏಜೆನ್ಸಿಯವರನ್ನು ನೇಮಿಸಿದ್ದು, ಅವರ ಮುಖಾಂತರ ಹಾಗೂ ಇಲಾಖಾ ಗುಣ ನಿಯಂತ್ರಣ ವ್ಯವಸ್ಥೆಯೊಂದಿಗೆ ಗುಣಮಟ್ಟ ಕಾಪಾಡಿಕೊಳ್ಳಲು ಸೂಕ್ತ ಕ್ರಮ ಜರುಗಿಸಲಾಗುತ್ತಿದೆ. ಟೆಂಡರ್ ಕರಾರಿನ ಅನ್ವಯ ಕಾಮಗಾರಿ ಪೂರ್ಣಗೊಂಡ ನಂತರ ಎರಡು ವರ್ಷದವರೆಗೆ ನಿರ್ವಹಣೆಯನ್ನು ಗುತ್ತಿಗೆದಾರರೇ ನಿರ್ವಹಿಸಬೇಕಾಗಿದ್ದು, ಕಾಮಗಾರಿಗಳಲ್ಲಿ ಕಂಡುಬರುವ ನ್ಯೂನತೆಗಳನ್ನು ಸರಿಪಡಿಸಲು ಸರ್ಕಾರಕ್ಕೆ ಯಾವುದೇ ಆರ್ಥಿಕ ಹೊರೆ ಆಗುವುದಿಲ್ಲ.

ಆ) ಮೇಲಿನ ಉತ್ತರದಿಂದಾಗಿ ಈ ಪ್ರಶ್ನೆ ಉದ್ಭವಿಸುವುದಿಲ್ಲ

ಗೋಂದಿ ಚಾನಲ್

48 (240) ಶ್ರೀ ಸಂಗಮೇಶ್ ಬಿ. ಕೆ. (ಭದ್ರಾವತಿ):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಭದ್ರಾವತಿ ಕ್ಷೇತ್ರದಲ್ಲಿ ಗೋಂದಿ ಚಾನಲ್‌ನಲ್ಲಿ ಹೂಳು ತುಂಬಿಕೊಂಡಿದ್ದು, ರೈತರಿಗೆ ಸಮರ್ಪಕವಾಗಿ ನೀರು ಸರಬರಾಜಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಎಂದು ಹೂಳು ತೆಗೆಯಲು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) 2011–12ನೇ ಸಾಲಿಗೆ ಲೆಕ್ಕ ಶೀರ್ಷಿಕೆ 2701–ಗೋಂದಿ ಅಣೆಕಟ್ಟು ಯೋಜನೆ (ಎಂ & ಎಂ.ಐ.) ಅಡಿಯಲ್ಲಿ ಸರ್ಕಾರದಿಂದ ಒಟ್ಟಾರೆಯಾಗಿ ಒದಗಿಸಲಾದ ರೂ. 28.79 ಲಕ್ಷಗಳ ಅನುದಾನದಲ್ಲಿ ನೀರು ನಿರ್ವಹಣೆಗೆ ಅವಶ್ಯವಿರುವ ಸೌಡಿಗಳ ವೇತನ ಪಾವತಿ, ವಾಹನ ನಿರ್ವಹಣೆ ಮತ್ತು ಅಗತ್ಯವಿರುವ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲು ಅವಕಾಶ ಮಾಡಿ ಕಾರ್ಯಕ್ರಮ ಪಟ್ಟಿಯನ್ನು ಅನುಮೋದಿಸಿಕೊಂಡು ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.

ಭದ್ರಾವತಿ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಗೋಂದಿ ಅಣೆಕಟ್ಟು ಯೋಜನೆಯ ನಾಲೆಗಳಲ್ಲಿ ಹೂಳು ಮತ್ತು ಜಂಗಲ್ ತುಂಬಿಕೊಂಡಿದ್ದು, ನಾಲೆಗಳಲ್ಲಿ ನೀರಿನ ಹರಿವಿಗೆ ಅಡಚಣೆ ಉಂಟಾಗಿರುತ್ತದೆ.

ಕೂಡಲೇ ನಾಲೆಗಳಲ್ಲಿ ಹೂಳನ್ನು ತೆಗೆಸಲು ಅನುದಾನವನ್ನು ಒದಗಿಸಿಕೊಂಡು, ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

J.T.O. ಹುದ್ದೆಗೆ ನೇಮಕಾತಿ

50 (247) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ):– ಮಾನ್ಯ ಕಾರ್ಮಿಕ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) 2010ರಲ್ಲಿ ಸರ್ಕಾರಿ ಐ.ಟಿ.ಐ.ಗಳಿಗೆ 402 ಜೆ.ಟಿ.ಓ. ಹುದ್ದೆಗಳನ್ನು ಭರ್ತಿ ಮಾಡಿರುವುದು ಮತ್ತು ಅದರಲ್ಲಿ ಸಾಕಷ್ಟು ಅಭ್ಯರ್ಥಿಗಳು ಖೊಟಿ ಅನುಭವ ಪ್ರಮಾಣಪತ್ರಗಳನ್ನು ಸಲ್ಲಿಸಿ ಆಯ್ಕೆಗೊಂಡಿರುವುದು ಇಲಾಖೆಯ ಪರಿಶೀಲನಾಧಿಕಾರಿಗಳು ದಾಖಲೆಗಳ ನೈಜತೆಯನ್ನು ಪರಿಶೀಲಿಸದೇ ನೇಮಕಾತಿ ಆದೇಶ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಸದರಿ ನೇಮಕಾತಿಗೂ ಪೂರ್ವದಲ್ಲಿ ಅನುಭವ ಪ್ರಮಾಣಪತ್ರಗಳ ನೈಜತೆಯನ್ನು ಪರಿಶೀಲಿಸುವಂತೆ ಮುನ್ನೆಚ್ಚರಿಕೆ ದೂರುಗಳು ಇಲಾಖೆಗೆ ಸಲ್ಲಿಕೆಯಾಗಿದ್ದು, ಅವುಗಳನ್ನು ಗಣನೆಗೆ ತೆಗೆದುಕೊಳ್ಳದೇ ನೇಮಕಾತಿ ಆದೇಶ ಜಾರಿ ಮಾಡಿರುವುದು ಸರ್ಕಾರದ ಗಮನಕ್ಕೆ